UASB Library
Newspaper Clippings
Monday 07-02-2022 Pg .1
Jai Kisan

40 ಲಕ್ಷ ರೂಪಾಯಿ ವೆಚ್ಚದಲ್ಲಿ ಬಾನುಲಿ ಕೇಂದ್ರ ಆರಂಭಕ್ಕೆ ಸಿದ್ಧತೆ

ಕೃಷಿ ವಿವಿ ಬಾನುಲಿ, ಮಾಹಿತಿ ಭಾಗ್ಯ

■ ಜಗನ್ನಾಥ ಆರ್. ದೇಸಾಯಿ
ರಾಯಚೂರು
jagannath.r@timesgroup.com

ಕಲ್ಯಾಣ ಕರ್ನಾಟಕದ ರೈತರ ಕೃಷಿಗೆ ನೆರವಾಗುತ್ತಿರುವ ರಾಯಚೂರು ಕೃಷಿ ವಿಶ್ವವಿದ್ಯಾಲಯ ಈಗ ತನ್ನದೇ ಆದ ಬಾನುಲಿ ಕೇಂದ್ರವನ್ನು ತೆರೆಯಲು ಸಜ್ಜಾಗಿದೆ. ಮಾರ್ಚ್‌ನಲ್ಲಿ ಕೇಂದ್ರ ಸರಕಾರದ ಜತೆ ಒಪ್ಪಂದ ಮಾಡಿಕೊಳ್ಳುವ ಕಾರ್ಯಕ್ಕೆ ಚಾಲನೆ ಸಿಗಲಿದೆ. ರೈತರಿಗೆ ನಿರಂತರ ಮಾಹಿತಿ ರವಾನಿಸುತ್ತಿರುವ ಈ ವಿವಿ ಇದೀಗ ಸ್ವಂತ ಆಕಾಶವಾಣಿ ಕೇಂದ್ರದ ಆರಂಭಕ್ಕೆ ಸಿದ್ಧತೆ ನಡೆಸಿದೆ.

ಬಾನುಲಿ ಕೇಂದ್ರ: ಕೃಷಿ ವಿಜ್ಞಾನಿಗಳು ಕೈಗೊಳ್ಳುವ ಆವಿಷ್ಕಾರವನ್ನು ರೈತರಿಗೆ ತಲುಪಿಸುವ ಉದ್ದೇಶ ಈ ಬಾನುಲಿ ಸ್ಥಾಪನೆಯ ಉದ್ದೇಶವಾಗಿದೆ. ಸದ್ಯ ನಲವತ್ತು ಸಾವಿರಕ್ಕೂ ಹೆಚ್ಚಿನ ರೈತರಿಗೆ ಮೊಬೈಲ್ ಮೂಲಕ ಮಾಹಿತಿ ರವಾನಿಸುವ ಕಾರ್ಯ ಜರೂರಾಗಿ ನಡೆದಿದೆ. ಮುಂಗಾರು ಹಾಗೂ ಹಿಂಗಾರು ಹಂಗಾಮಿನ ವೇಳೆ ಹಾಗೂ ಬೆಳೆಗಳಿಗೆ ಕೀಟ ಕಾಟ ಶುರುವಾದಾಗ ಕೈಗೊಳ್ಳಬೇಕಾದ ನಿಯಂತ್ರಣಾ ಕ್ರಮಗಳ ಕುರಿತು ನಿರಂತರ ಮಾಹಿತಿಯನ್ನು ಮೊಬೈಲ್ ಸಂದೇಶದ ಮೂಲಕ ರವಾನಿಸಲಾಗುತ್ತಿದೆ.ಎಲ್ಲರೈತ ಸಮೂಹಕ್ಕೆ ಸಮಗ್ರ ಮಾಹಿತಿ ತಲುಪುತ್ತಿಲ್ಲ ಎಂಬುದು ವಿವಿ ಆಡಳಿತಕ್ಕೆ ಗೊತ್ತಿತ್ತು. ಹೀಗಾಗಿ ಪ್ರತ್ಯೇಕವಾಗಿ ಕೃಷಿ ಸಂಬಂಧಿ ಕಾರ್ಯಕ್ರಮಗಳ ಪ್ರಸಾರವನ್ನು ಆರಂಭಿಸಲು ಯೋಜಿಸಿದೆ.

ಕೋವಿಡ್‌ನಿಂದ ತಡ: 40 ಲಕ್ಷ ರೂ. ವೆಚ್ಚದಲ್ಲಿ ಆಕಾಶವಾಣಿ ಕೇಂದ್ರ ಸ್ಥಾಪನೆಗೆ ಕಳೆದ ವರ್ಷ ನಿರ್ಧರಿಸಿತ್ತು. ಆದರೆ, ಕೋವಿಡ್ ಕಾರಣಕ್ಕೆ ಈಗಾಗಲೇ ಈ ಕೇಂದ್ರ ಸ್ಥಾಪನೆ ಹಾಗೂ ಪ್ರಸಾರದ ಆರಂಭ ತಡವಾಗಿದೆ. ಇದೀಗ ಮುಂದಿನ ತಿಂಗಳು ಆಕಾಶವಾಣಿ ಕೇಂದ್ರ ಶುರು ಮಾಡಲು ವ್ಯಾಪಕ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಕೇಂದ್ರದಿಂದಲೇ ನೆರವು: ಕೇಂದ್ರ ಸರಕಾರದೊಂದಿಗೆ ಈಗಾಗಲೇ ನಡೆಸಿದ ಮಾತುಕತೆ ವೇಳೆ ಆಕಾಶವಾಣಿ ಆರಂಭಕ್ಕೆ ಅಗತ್ಯವಿರುವ ಎಲ್ಲ ಉಪಕರಣಗಳನ್ನು ಕೇಂದ್ರ ಸರಕಾರಕ್ಕೆ ಸಂಬಂಧಿಸಿದ ಸಚಿವಾಲಯವೇ ಒದಗಿಸಲಿದೆ. ಜತೆಗೆ ಒಂದು ವರ್ಷ ಪ್ರಸಾರದ ವೆಚ್ಚದ ಹೊಣೆ ಹೊರಲಿದೆ ಎಂದು ಗೊತ್ತಾಗಿದೆ. ಆನಂತರ ಸ್ಥಳೀಯವಾಗಿ ಸಂಪನ್ಮೂಲ ಒಟ್ಟುಗೂಡಿಸಿಕೊಂಡು ಮುನ್ನಡೆಸಬೇಕಿದೆ.

ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿ ಎಲ್ಲ ರೈತರನ್ನು ಈ ಆಕಾಶವಾಣಿ ಕೇಂದ್ರದ ಮೂಲಕ ತಲುಪುವ ಪ್ರಯತ್ನವನ್ನು ಕೃಷಿ ವಿವಿ ಆಡಳಿತ ಮಂಡಳಿ ಮಾಡುತ್ತಿದ್ದು, ಕೃಷಿ ವಿಜ್ಞಾನಿಗಳಿಂದ ರೈತರಿಗೆ ಮಾಹಿತಿ ನೀಡಿಕೆ, ಕೃಷಿ ಪೂರಕ ಕಾರ್ಯಕ್ರಮಗಳ ಆಯೋಜನೆ ಮತ್ತು ಪ್ರಸಾರ ಮಾಡಲು ಈ ಕೇಂದ್ರ ಬಳಕೆಗೆ ನಿರ್ಧರಿಸಲಾಗಿದೆ.

ಇದೇ ವರ್ಷದಲ್ಲಿ 2ನೇ ಕೇಂದ್ರ: ಈಗಾಗಲೇ ರಾಜ್ಯದಲ್ಲಿ ಧಾರವಾಡ ವಿವಿಯಲ್ಲಿ ಈ ರೀತಿಯ ಆಕಾಶವಾಣಿ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ರಾಯಚೂರಿನಲ್ಲಿ ಸ್ಥಾಪನೆಯಾಗಲಿರುವ ಆಕಾಶ ವಾಣಿ ಕೇಂದ್ರವು ಎರಡನೇ ಕೇಂದ್ರವೆನಿಸಲಿದೆ. ಮಾರ್ಚ್‌ನಲ್ಲಿ ಒಪ್ಪಂದವಾಗುತ್ತಿದ್ದಂತೆ ಆಕಾಶವಾಣಿ ಕೇಂದ್ರ ನಿರ್ಮಾಣ ಕಾರ್ಯ ಇದೇ ವರ್ಷದಲ್ಲಿ ನಡೆಯಲಿದೆ ಎಂಬ ಮಾತು ಕೇಳಿಬಂದಿದೆ.

ಮಾರ್ಚ್‌ನಲ್ಲಿ ಕೇಂದ್ರ ಸರಕಾರದ ಜತೆ ಒಪ್ಪಂದ



ಕೇಂದ್ರ ಸಚಿವಾಲಯದಿಂದಲೇ ಉಪಕರಣಗಳು ಸೌಲಭ್ಯ

ರಾಯಚೂರು ಕೃಷಿ ವಿವಿಯಿಂದ ಆಕಾಶವಾಣಿ ಕೇಂದ್ರ ಪ್ರಾರಂಭಕ್ಕೆ ಕೇಂದ್ರ ಸರಕಾರದ ಜತೆ ಒಪ್ಪಂದಕ್ಕೆ ಸಿದ್ಧತೆ ನಡೆದಿದೆ.

- ಡಾ.ಕೆ.ಎನ್.ಕಟ್ಟಿಮನಿ, ಕುಲಪತಿಗಳು, ಕೃಷಿ ವಿಜ್ಞಾನಗಳ ವಿವಿ, ರಾಯಚೂರು

ರೈತರಿಗೆ ಉಪಯುಕ್ತ

2007ರ ಮೇ 17ರಂದು ಧಾರವಾಡ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ (ಯುಎಎಸ್) ಕ್ಯಾಂಪಸ್‌ನಲ್ಲಿ ಕೃಷಿ ಸಮುದಾಯ ಎಫ್ ಎಂ ರೇಡಿಯೊ ಪ್ರಾರಂಭವಾಯಿತು. ಇಲ್ಲಿಯವರೆಗೆ ಕೃಷಿಗೆ ಸಂಬಂಧಿಸಿದ ಆನೇಕ ರೈತ ಸ್ನೇಹಿ ಕಾರ್ಯಕ್ರಮ ಪ್ರಸಾರ ಮಾಡಿ ರೈತರ ಗಮನ ಸೆಳೆದಿದೆ. ಧಾರವಾಡ ಜಿಲ್ಲೆಯ 50-60 ಹಳ್ಳಿಗಳ ಕೇಳುಗರಿಗೆ ಇದು ಆಪ್ಯಾಯಮಾನವಾಗಿದೆ.

07-02-2022 Vk Pg 04

ವಿ ರೈತ ಮಿತ್ರ

ತೋಟಗಾರಿಕೆ ಬೆಳೆಗಳಲ್ಲಿ ಗೂಟಿ ವಿಧಾನದಿಂದ ಸಸ್ಯಾಭಿವೃದ್ಧಿ ಹೇಗೆ? ಇದರಿಂದಾಗುವ ಅನುಕೂಲಗಳೇನು?

ಸತೀಶ ಧರ್ಮಪುರ, ದೇವನಹಳ್ಳಿ ತಾಲೂಕು

ಗೂಟಿ ವಿಧಾನವನ್ನು ಮುಖ್ಯವಾಗಿ ಪೇರಲ, ದಾಳಿಂಬೆ, ಅಂಜೂರ ಇತ್ಯಾದಿ ಹಣ್ಣಿನ ಬೆಳೆಗಳಲ್ಲಿ ಅನುಸರಿಸುತ್ತಾರೆ. ಇದರಿಂದ ಗುಣಮಟ್ಟದ ಹೆಚ್ಚಿನ ಸಂಖ್ಯೆಯ ಸಸಿಗಳನ್ನು ಪಡೆಯಬಹುದು.

ವಿಧಾನ: ಮೊದಲಿಗೆ ರೋಗಮುಕ್ತವಾದ ಹೆಚ್ಚಿನ ಇಳುವರಿ ಕೊಡುವ ಗಿಡಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಈ ಗಿಡಗಳಲ್ಲಿ ತೊಗಟೆಯನ್ನು ಸರಳವಾಗಿ ತೆಗೆಯಲು ಬರುವಂತಹ ಪೆನ್ಸಿಲ್ ಗಾತ್ರದ ಟೊಂಗೆ ಆರಿಸಬೇಕು. ಬೆಳೆಯುವ ತುದಿಯಿಂದ 15 ರಿಂದ 30 ಸೆಂ.ಮೀ. ಬಿಟ್ಟು 2.5 ಸೆಂ.ಮೀ. ನಷ್ಟು ಆಗಲದ ತೊಗಟೆಯನ್ನು ತೆಗೆಯಬೇಕು. ಇದಕ್ಕೆ ಗರ್ಡಲಿಂಗ್ ಎಂದು ಕರೆಯುತ್ತಾರೆ. ಈ ರೀತಿ ತೊಗಟೆ ತೆಗೆದ ಭಾಗದಲ್ಲಿ ಮತ್ತೊಮ್ಮೆ ಚಾಕುವಿನಿಂದ ಸವರಿ ಉಳಿದ ಕೆಂಬಿಯಂ ಅಂಗಾಂಶವನ್ನು ಸಂಪೂರ್ಣವಾಗಿ ತೆಗೆಯಬೇಕು. ನಂತರ ಗರ್ಡಲ್ ಮಾಡಿದ ಭಾಗವನ್ನು ಹಸಿಯಾದ ಸ್ಫ್ಯಾಗ್ನಮ್ ಮಾಸ್‌ನಿಂದ ಮುಚ್ಚಿ, ಪ್ಲಾಸ್ಟಿಕ್ ಹಾಳೆಯನ್ನು ಉಪಯೋಗಿಸಿ ಗಟ್ಟಿಯಾಗಿ ಕಟ್ಟಬೇಕು. ಕಟ್ಟಿದ 45 ರಿಂದ 60 ದಿನಗಳಲ್ಲಿ ಬೇರುಗಳು ಕಾಣಿಸಿಕೊಳ್ಳುತ್ತವೆ. ನಂತರ ಬೇರುಗಳನ್ನು ಬಲಿಯಲು ಬಿಟ್ಟು ಸುಮಾರು 30 ದಿನಗಳಾದ ಮೇಲೆ ಪ್ಲಾಸ್ಟಿಕ್ ಹಾಳೆ ಕಟ್ಟಿದ ಕೆಳಭಾಗದಲ್ಲಿ ಕಚ್ಚು ಕೊಟ್ಟು ಕತ್ತರಿಸಬೇಕು. ಆಮೇಲೆ ಸುತ್ತಿದ ಪ್ಲಾಸ್ಟಿಕ್ ಹಾಳೆ ತೆಗೆದು ಮಾಸ್ ಸಹಿತವಾಗಿ ಕುಂಡಗಳಲ್ಲಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಭಾಗಶಃ ನೆರಳಿನಲ್ಲಿಟ್ಟು ಪೋಷಿಸಬೇಕು.



ಡಾ. ಶಾಲಿನಿ ಎಂ.
ತೋಟಗಾರಿಕೆ ತಜ್ಞರು

ಬೆಂಡೆ ಬೆಳೆಯಲ್ಲಿ ಕಾಯಿ ಕೊರೆಯುವ ಹುಳುವಿನ ಬಾಧೆ ನಿಯಂತ್ರಿಸುವುದು ಹೇಗೆ?

ನಾಗರಾಜು ಶಹಾಪುರ ತಾಲೂಕು



ಮೊದಲು ಮರಿಹುಳುಗಳು ಎಳೆಯ ರೆಂಬೆಗಳನ್ನು ಕೊರೆದು ತಿನ್ನುವುದರಿಂದ ರೆಂಬೆ ಒಣಗುತ್ತವೆ. ನಂತರ ಹೂ ಮೊಗ್ಗುಗಳು ಮತ್ತು ಹೂಗಳನ್ನು ತಿನ್ನುವುದರಿಂದ ಕೆಳಗೆ ಬಿದ್ದು ಹಾಳಾಗುತ್ತವೆ. ಕ್ರಮೇಣ ಕಾಯಿಗಳನ್ನು ಕೊರೆದು ಒಳಭಾಗ ಮತ್ತು ಎಳೆಯದಾದ ಬೀಜಗಳನ್ನು ತಿನ್ನುತ್ತವೆ. ಈ ಹುಳುಗಳಿಂದ ಬಾಧಿತವಾದ ಕಾಯಿಗಳು ವಕ್ರವಾಗಿರುತ್ತದೆ.

ನಿರ್ವಹಣೆ: ಮುಂಜಾನೆ ಹೊತ್ತಿನಲ್ಲಿ ಮೂತಿ ಹುಳುಗಳನ್ನು ಆರಿಸಿ ಸಾಯಿಸಬೇಕು. ಪ್ರತಿ ಲೀ. ನೀರಿಗೆ 2 ಮಿ.ಲೀ. ಕ್ವಿನಾಲ್‌ಫಾಸ್ 25 ಇ.ಸಿ. ಬೆರೆಸಿ ಸಿಂಪಡಿಸಬೇಕು. ಬಿತ್ತನೆಯಾದ 5 ವಾರಗಳ ನಂತರ ಬೆಳೆಗೆ 2 ಮಿ.ಲೀ. ಮೆಲಾಥಿಯಾನ್ 50 ಇ.ಸಿ. ಅಥವಾ 4 ಗ್ರಾಂ ಕಾರ್ಬಾರಿಲ್ 50 ಡಬ್ಲ್ಯು.ಪಿ. ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಪ್ರಿಯಾಂಕ ಬಿ. ಸಸ್ಯರೋಗ ತಜ್ಞರು

ಬೇಸಿಗೆಗೆ ಸೂಕ್ತವಾದ ದ್ವಿದಳಧಾನ್ಯ ಬೆಳೆಗಳನ್ನು ತಿಳಿಸಿ?

ವೀರಭದ್ರೇಗೌಡ ಶ್ರೀನಿವಾಸಪುರ ತಾಲೂಕು

ಬೇಸಿಗೆ ಹಂಗಾಮಿನಲ್ಲಿ ನೀರಿನ ಲಭ್ಯತೆಗನುಣವಾಗಿ ದ್ವಿದಳ ಧಾನ್ಯ ಬೆಳೆಯಬಹುದು. ಅಲ್ಲದೆ, ಇವುಗಳನ್ನು ಬೆಳೆಯುವುದರಿಂದ ಮಣ್ಣಿನ ಆರೋಗ್ಯವನ್ನೂ ಕಾಪಾಡಬಹುದು. ಈ ಹಂಗಾಮಿಗೆ ಸೂಕ್ತವಾದ ದ್ವಿದಳ ಧಾನ್ಯಗಳು ಕೆಳಕಂಡಂತಿವೆ. **ಸೂಚನೆ:** ಅವರೆಯನ್ನು 70-75 ದಿನಗಳಲ್ಲಿ ತರಕಾರಿಗೆ (ಹಸಿಕಾಯಿಗೆ) ಕಟಾವು ಮಾಡಬಹುದು.

ದ್ವಿದಳ ಧಾನ್ಯ	ಅವಧಿ (ದಿನಗಳು)	ಇಳುವರಿ (ಕ್ವಿಂ./ಎಕರೆಗೆ)
ಹೆಸರು	65-70	4-5
ಉದ್ದು	80-85	5-8
ಅಲಸಂದೆ	80-90	5-6
ಅವರೆ	90-95	3-4

ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು- ಇಲ್ಲಿನ ತಜ್ಞರು ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

07-02-2022 Vv Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in

ಕೋಕೋಪಿಟ್‌ಗೆ ಜೈ ಜವಾನ್

ರೈತರಿಗೆ ನೆರವಾಗುತ್ತಿರುವ ಮಾಜಿ ಯೋಧ



ಶಿವು ಹುಣಸೂರು

ಹದಿನೇಳು ವರ್ಷ ದೇಶ ರಕ್ಷಣೆ ಮಾಡಿ, ನಿವೃತ್ತಿ ಹೊಂದಿದ ಬಳಿಕ ಹುಟ್ಟೂರಿಗೆ ಬಂದ ಯೋಧ, ಪ್ರಸ್ತುತ ಕೋಕೋಪಿಟ್ ಸಾವಯವ ಗೊಬ್ಬರ ಘಟಕ ಸ್ಥಾಪಿಸಿ 'ಜೈ ಜವಾನ್ - ಜೈ ಕಿಸಾನ್' ವಾಣಿಯನ್ನು ಮೊಳಗಿಸಿದ್ದಾರೆ.

ಹುಣಸೂರು ತಾಲೂಕು ಎಮ್ಮೆಕೊಪ್ಪಲು ಗ್ರಾಮದ ಮೋಹನ್‌ಕುಮಾರ್, ವಾಯುಸೇನಾ ವಿಭಾಗದ ವಿವಿಧ ಹುದ್ದೆಗಳಲ್ಲಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿ 2016ರಲ್ಲಿ ಸ್ವಯಂ ನಿವೃತ್ತಿ ಹೊಂದಿದರು. ಇದೀಗ ಗ್ರಾಮದಲ್ಲೇ ಯಶಸ್ವಿನಿ ಗೋಲ್ಡ್ ಕೋಕೋಪಿಟ್ ಸಾವಯವ ಗೊಬ್ಬರ ತಯಾರಿಕಾ ಘಟಕ ಸ್ಥಾಪನೆ ಮಾಡಿ, ಹಲವು ರೈತರಿಗೆ ನೆರವಾಗಿದ್ದಾರೆ.

ಮೂಲತಃ ಕೃಷಿಕ ಕುಟುಂಬದ ಹಿನ್ನೆಲೆಯುಳ್ಳ ಮೋಹನ್‌ಕುಮಾರ್, ಬೆಂಗಳೂರಿಗೆ ವರ್ಗವಾದ ವೇಳೆ ಸಹೋದರ ಲಿಂಗರಾಜು ಅವರೊಂದಿಗೆ ಚರ್ಚಿಸಿ ಕೋಕೋಪಿಟ್ ಘಟಕ ಸ್ಥಾಪಿಸಿದರು. ಬೆಂಗಳೂರಿನ ಜಿಕೆವಿಕೆಯ ಹಿರಿಯ ಅಧಿಕಾರಿಗಳಿಂದ ಸೂಕ್ತ ಮಾಹಿತಿ ಪಡೆದು ಸಣ್ಣದಾಗಿ ಘಟಕ ಆರಂಭಿಸಿದರು. ಜಿಲ್ಲೆಯ ಹಲವಾರು ಕಡೆ ತೆಂಗಿನ ನಾರಿನ ಘಟಕಗಳಲ್ಲಿ ಕೇವಲ ತೆಂಗಿನ ನಾರನ್ನು ಬೇರ್ಪಡಿಸುವ ಕಾರ್ಯ ನಡೆದಿರುತ್ತದೆ. ಆದರೆ, ತೆಂಗಿನ ನಾರು ಬೇರ್ಪಡಿಸಿ ಅದನ್ನು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸುವ ಘಟಕಗಳು ಅತ್ಯಂತ ವಿರಳವಾಗಿದ್ದು, ಈ ನಿಟ್ಟಿನಲ್ಲಿ ಮೋಹನ್‌ಕುಮಾರ್ ಸ್ಥಳೀಯವಾಗಿ ರೈತರ ಮನೆ ಬಾಗಿಲಲ್ಲಿ ಸಾವಯವ ಗೊಬ್ಬರ ಸಿಗುವಂತೆ ಮಾಡಿದ್ದಾರೆ.

ವಿಶೇಷತೆಗಳು

ತೆಂಗಿನ ನಾರಿನಿಂದ ತಯಾರಾದ ಈ ಗೊಬ್ಬರ ಬಳಕೆಯಿಂದ ಮಣ್ಣಿನಲ್ಲಿ ಗಾಳಿಯಾಡುವಿಕೆ ಹೆಚ್ಚಿಸುತ್ತದೆ. ನೀರಿನ ಅಂಶವನ್ನು ಹೆಚ್ಚು ಕಾಲ ಹಿಡಿದಿಡುವ ಶಕ್ತಿ ಇದೆ. ಮಣ್ಣಿನ ಫಲವತ್ತತೆ ಹೆಚ್ಚುತ್ತದೆ. ಇತ್ತೀಚಿನ ದಿನಗಳಲ್ಲಿ ಶುಂಠಿ ಬೆಳೆಗೂ ಈ ಗೊಬ್ಬರವನ್ನು ರೈತರು ಬಳಸುತ್ತಿದ್ದಾರೆ.



ಎಲ್ಲ ಬೆಳೆಗಳಿಗೂ ಕೋಕೋಪಿಟ್: ತಾಲೂಕಿನ ಬಿಳಿಕೆರೆ ಹೋಬಳಿ ಶೇ.80 ಮಳೆಯಾಶ್ರಿತ ಕೃಷಿ ಪ್ರದೇಶವಾಗಿದೆ. ಹಾಗಾಗಿ, ಈ ಭಾಗದ ರೈತರು ತಂಬಾಕಿಗಿಂತ ತರಕಾರಿ, ಹೂವು, ಹಣ್ಣಿನ ಬೆಳೆಗಳನ್ನು ಬೆಳೆದು ಪಕ್ಕದ ಮೈಸೂರಿಗೆ ತೆರಳಿ ಮಾರಾಟ ಮಾಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ರೈತರು ಬೆಳೆಯುವ ಪ್ರತಿಯೊಂದು ಬೆಳೆಗೂ ಕೋಕೋಪಿಟ್ ಬಳಸಲು ಆರಂಭಿಸಿದ್ದು, ಉತ್ತಮ ಇಳುವರಿ ಪಡೆಯುತ್ತಿದ್ದಾರೆ.

30 ಕುಟುಂಬಗಳಿಗೆ ಜೀವನ: ಮೋಹನ್‌ಕುಮಾರ್ ಸ್ಥಾಪಿಸಿರುವ ಘಟಕದಲ್ಲಿ 30ಕ್ಕೂ ಹೆಚ್ಚು ಕೆಲಸಗಾರರು ದುಡಿಯುತ್ತಿದ್ದು, ಅವರಿಗೆ ಸ್ಥಳೀಯವಾಗಿ ಉದ್ಯೋಗ ದೊರಕಿರುವ ಸಮಾಧಾನವಿದೆ. ಪ್ರತಿದಿನ ಕನಿಷ್ಠ 32 ಸಾವಿರ ಕೆಜಿ ಕೋಕೋಪಿಟ್ ತಯಾರಿಸಿ ಮಾರಾಟ ಮಾಡುವ ಮೂಲಕ ದಾಖಲೆ ನಿರ್ಮಿಸಿದ್ದಾರೆ.

ಅಂತಾರಾಜ್ಯ ಮಾರಾಟಗಾರ: ಅತ್ಯಂತ ವೈಜ್ಞಾನಿಕವಾಗಿ, ಗುಣಮಟ್ಟದಿಂದ ಇಸಿ ಮತ್ತು ಪಿಎಚ್ ಲೆವೆಲ್‌ಗಳನ್ನು ನಿರ್ದಿಷ್ಟ ಪ್ರಮಾಣದಲ್ಲಿ ಖಾತ್ರಿಪಡಿಸಿಕೊಂಡು ಅಂತಿಮ ಹಂತದಲ್ಲಿ ಮೈಕ್ರೋನ್ಯೂಟ್ರಿಯೆಂಟ್‌ಗಳನ್ನು ಸೇರಿಸಿ ಗೊಬ್ಬರ ತಯಾರಿಸಿ ರೈತರಿಗೆ ಮಾರಾಟ ಮಾಡಲಾಗುತ್ತಿದೆ. ಇದೀಗ ಇವರ ಘಟಕದ ಗೊಬ್ಬರಕ್ಕೆ ಕೇರಳ, ತಮಿಳುನಾಡು, ಮಹಾರಾಷ್ಟ್ರದಲ್ಲೂ ಬೇಡಿಕೆಯಿದೆ. ರಾಜ್ಯದ ಮೈಸೂರು, ಕೊಡಗು, ಚಾಮರಾಜನಗರ, ಹಾಸನ, ಮಂಡ್ಯ, ದಾವಣಗೆರೆ, ಬೆಳಗಾವಿ ಮುಂತಾದ ಜಿಲ್ಲೆಗಳಿಗೆ ಪೂರೈಕೆಯಾಗುತ್ತಿದೆ.

07-02-2022
Vk Pg 11

07-02-2022
Hd Pg 07

ಗರಿಷ್ಠ ದರಕ್ಕೆ ಮಾರಾಟ: ರೇಷ್ಮೆ ಬೆಳಗಾರರಲ್ಲಿ ಸಂತಸ

ರೇಷ್ಮೆ 812 ರೂ.ಗೆ ಮಾರಾಟ

ಕೋಲಾರ: ಜಿಲ್ಲೆಯ ಬಂಗಾರಪೇಟೆ ತಾಲೂಕು ಹೊಸಕೋಟೆ ಗ್ರಾಮದ ರೈತ ಶ್ರೀನಿವಾಸ್ ನಗರದ ರೇಷ್ಮೆ ಮಾರುಕಟ್ಟೆಯಲ್ಲಿ ಬೈವೋಲ್ಟೀನ್ ತಳಿಯ ಪ್ರತಿ ಕೆಜಿ ರೇಷ್ಮೆ ಗೂಡಿಗೆ ಗರಿಷ್ಠ 812 ರೂಗಳಿಗೆ ಮಾರಾಟ ಮಾಡಿ ದಾಖಲೆ ಬರೆದಿದ್ದಾರೆ.

ನಗರದ ರೇಷ್ಮೆ ಮಾರುಕಟ್ಟೆಯಲ್ಲಿ ಪ್ರತಿನಿತ್ಯ 5 ಟನ್ ರೇಷ್ಮೆ ಗೂಡಿಗೆ ಬೇಡಿಕೆಯಿದೆ. ಆದರೆ ಚಳಿಗಾಲದ ಜೊತೆಗೆ ಕಳೆದ ತಿಂಗಳ ಮಳೆಯಿಂದಾಗಿ ಹಿಪ್ಪುನೇರಳೆ ಬೆಳೆ ಬೆಳೆ ಹಾಳಾಗಿದೆ. ಮಾರುಕಟ್ಟೆಗೆ ನಿತ್ಯ 2 ಟನ್ ಮಾತ್ರ ರೇಷ್ಮೆ ಗೂಡು ಪೂರೈಕೆಯಾಗುತ್ತಿದೆ. ಇದರಿಂದ ಪ್ರತಿ ಕೆಜಿ ರೇಷ್ಮೆ ಗೂಡಿಗೆ 800 ರಿಂದ 900 ರೂಪಾಯಿ ಮುಟ್ಟಿದೆ.

ಬಂಗಾರಪೇಟೆ ತಾಲ್ಲೂಕು ಹೊಸಕೋಟೆ ಗ್ರಾಮದ ರೈತ ಶ್ರೀನಿವಾಸ್ ನಗರದ ರೇಷ್ಮೆ ಮಾರುಕಟ್ಟೆಯಲ್ಲಿ ಬೈವೋಲ್ಟೀನ್ ತಳಿಯ ಪ್ರತಿ ಕೆಜಿ ಗೂಡಿಗೆ ಗರಿಷ್ಠ 812 ರೂಗಳಿಗೊರಾಟ ಮಾಡಿ ಮಾತನಾಡಿ, ಕಳೆದ 30 ವರ್ಷಗಳಿಂದ ಬೈವೋಲ್ಟೀನ್ ರೇಷ್ಮೆ ಗೂಡು ಬೆಳೆಯುತ್ತಿದ್ದು, ಹಲವಾರು ವರ್ಷಗಳಿಂದ ಒಂದು ಕೆ.ಜಿ ಗೂಡು 300 ರೂಗಳಿಂದ 450 ರೂಪಾಯಿಗಳಿಗೆ ಮಾರಾಟವಾಗುತಿತ್ತು. ಪ್ರಸ್ತುತ ಪ್ರತಿ ಕೆ.ಜಿ.ಗೆ 800 ರೂಗಳಿಂದ 900 ರೂಪಾಯಿಗಳಿಗೆ ಮಾರಾಟ ಆಗುತ್ತಿರುವುದರಿಂದ ರೈತರಿಗೆ ತುಂಬಾ ಅನುಕೂಲ ಆಗುವುದರೊಂದಿಗೆ ಸ್ವಲ್ಪಮಟ್ಟಿಗೆ ಹಣದ ಉಳಿತಾಯವಾಗುತ್ತಿದೆಯೆಂದು ಸಂತಸ ವ್ಯಕ್ತಪಡಿಸಿದರು.



ರೈತ ಶ್ರೀನಿವಾಸ್‌ರ ಮಗ ಮನೋಹರ್ ಮಾತನಾಡಿ, ಕೇಂದ್ರದ ಮೋದಿ ಸರ್ಕಾರ ಚೈನಾದ ರೇಷ್ಮೆ ಆಮದು ಮೇಲೆ ಕಡಿವಾಣ ಹಾಕಿದರ ಪರಿಣಾಮ ಸ್ಥಳೀಯ ರೇಷ್ಮೆ ಉದ್ಯಮ ಚೇತರಿಸಿಕೊಂಡಿದ್ದು, ಇದರಿಂದ ರೇಷ್ಮೆ ಗೂಡಿನ ಬೇಡಿಕೆ ಹೆಚ್ಚಾಗಿ ಬೆಲೆಯೂ ಹೆಚ್ಚಾಗಿದೆ, ಹಿಂದೆ ರಾಮನಗರಕ್ಕೆ ಹೋಗಿ ಬೈವೋಲ್ಟೀನ್ ರೇಷ್ಮೆ ಗೂಡು ಮಾರುತ್ತಿದ್ದೆವು ಪ್ರಸ್ತುತ ಕೋಲಾರದಲ್ಲಿ ಗೂಡು ಹರಾಜು, ಹಣ ಪಾವತಿ ಎಲ್ಲಾ ವ್ಯವಹಾರ ಆನ್ ಲೈನ್ ನಲ್ಲಿ ನಡೆಯುತ್ತಿದ್ದು, ಯಾವುದೇ ದಳ್ಳಾಳಿ ಕಾಟ ಇಲ್ಲದೆ ನೇರವಾಗಿ ರೈತರ ಕೈಗೆ ಹಣ ದೊರೆಯುತ್ತಿದೆ, ಇದರಿಂದ ರೈತರಿಗೆ ಹೆಚ್ಚಿನ ಲಾಭವಾಗಿ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳಲಿದೆಯೆಂದು ಸಂತಸ ವ್ಯಕ್ತಪಡಿಸಿದರು.

ಹಣ್ಣಿನ ಕೃಷಿ, ಭರ್ಜರಿ ಆದಾಯದ ಖುಷಿ

ಕೃಷಿಯಲ್ಲಿ ಹೆಚ್ಚು ಆದಾಯ ಗಳಿಸಬೇಕು ಅಂದ್ರೆ ತೋಟಗಾರಿಕೆ ಬೆಳೆಗಳತ್ತ ಗಮನಹರಿಸಬೇಕು. ಅದರಲ್ಲೂ ಹಣ್ಣಿನ ಬೆಳೆಗಳನ್ನು ಬೆಳೆದಾಗ ರೈತರು ನಿರಂತರವಾಗಿ ಸ್ಥಿರ ಆದಾಯ ಗಳಿಸಲು ಸಾಧ್ಯ. ಬನ್ನಿ, ಹೆಚ್ಚು ಲಾಭ ತಂದುಕೊಡಬಹುದಾದ ಮೂರು ವಾಣಿಜ್ಯ ಹಣ್ಣಿನ ಬೆಳೆಗಳ ಬಗ್ಗೆ ತಿಳಿದುಕೊಳ್ಳೋಣ.

ತೈವಾನ್ ಸೀಬೆ -ಎಕರೆಗೆ 5 ಲಕ್ಷ ರೂ. ಸಂಪಾದಿಸಿ: ವಿಶ್ವದಲ್ಲಿ ಅತಿ ಹೆಚ್ಚು ಸೀಬೆ ಬೆಳೆಯುವ ದೇಶ ಭಾರತ. ವಾರ್ಷಿಕ ಸುಮಾರು 2 ಕೋಟಿ 80 ಲಕ್ಷ ಟನ್ ಪೇರಳೆ ನಮ್ಮಲ್ಲಿ ಉತ್ಪಾದನೆಯಾಗುತ್ತದೆ. ನಮ್ಮ ದೇಶದಿಂದ 29 ದೇಶಗಳಿಗೆ ಸೀಬೆಹಣ್ಣು ರಫ್ತಾಗುತ್ತೆ. ಆದರೆ, ನಾವು ವಿದೇಶಕ್ಕೆ ರಫ್ತು ಮಾಡುತ್ತಿರುವುದು 6 ಕೋಟಿ 68 ಲಕ್ಷ ರೂ. ಮೌಲ್ಯದ ಸೀಬೆ ಮಾತ್ರ. ಸೀಬೆಹಣ್ಣಿನ ಆರೋಗ್ಯದ ಗುಣಗಳ ಬಗ್ಗೆ ಜನರು ಜಾಗೃತರಾಗುತ್ತಿರುವುದರಿಂದ ಜಗತ್ತಿನೆಲ್ಲೆಡೆ ಸೀಬೆಹಣ್ಣಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಅಂದ್ರೆ ಸೀಬೆ ಕೃಷಿ ಮಾಡಿ ಸಂಪಾದಿಸಬೇಕು ಅನ್ನೋರಿಗೆ ಎಂತಹ ದೊಡ್ಡ ಅವಕಾಶವಿದೆ ನೋಡಿ. ತೈವಾನ್ ಸೀಬೆ ಬೆಳೆಯಲು ದೊಡ್ಡ ಜಾಗವೇ ಬೇಕು ಎಂದೇನಿಲ್ಲ. ಒಂದು ಎಕರೆ ಜಮೀನಿದ್ದರೂ ಸಾಕು ಒಳ್ಳೆಯ ರೀತಿ ಕೃಷಿ ಮಾಡಿದರೆ ಉತ್ತಮ ಲಾಭ ಗಳಿಸಬಹುದು. ನೀರಿನ ಸಮಸ್ಯೆ ಇದೆ, ಹೆಚ್ಚು ಬಂಡವಾಳ ಹಾಕೋಕೆ ಸಾಧ್ಯವಿಲ್ಲ, ಪ್ರತಿ ತಿಂಗಳು ಒಂದಿಷ್ಟು ನಿರ್ದಿಷ್ಟ ಆದಾಯ ಬೇಕು, ಬೆಳೆಗೆ ಒಳ್ಳೆಯ ಮಾರುಕಟ್ಟೆ ಬೇಕು ಅನ್ನೋರಿಗೆ ತೈವಾನ್ ಸೀಬೆ ಹೇಳಿ ಮಾಡಿಸಿದಂತಿದೆ. ಸಾಮಾನ್ಯ ಸೀಬೆ ತಳಿಯಲ್ಲಿ ಎಕರೆಗೆ 60 ಗಿಡ ಬೆಳೆಸಬಹುದು. ಆದರೆ ತೈವಾನ್ ವೆರೈಟಿಯಲ್ಲಿ ಎಕರೆಗೆ 800 ಗಿಡ ಹಾಕಬಹುದು ಕಲ್ಲು ಭೂಮಿ ಹೊರತುಪಡಿಸಿ ಎಲ್ಲ ರೀತಿಯ ಭೂಮಿಗಳಲ್ಲೂ ಈ ಬೆಳೆ ಬೆಳೆಯಬಹುದು. ಮೊದಲ ಬಾರಿಗೆ ಸೀಬೆ ನಾಟಿ ಮಾಡಿದರೆ ಒಂದು ಎಕರೆಗೆ ಸುಮಾರು 2 ಲಕ್ಷ ರೂ. ಖರ್ಚು ಬರುತ್ತದೆ. ನಂತರದಲ್ಲಿ ಪ್ರತಿ ವರ್ಷ ಖರ್ಚು ಕಳೆದು ಸುಮಾರು 5 ಲಕ್ಷ ರೂ. ಲಾಭ ಸಿಗುತ್ತದೆ. ಅಂದರೆ ತಿಂಗಳ ಸಂಬಳ ಬರುವ ಹಾಗೆ ಪ್ರತಿ ತಿಂಗಳು 40,000 ರೂ. ಆದಾಯ ಸಿಗುತ್ತದೆ.

ಡ್ರ್ಯಾಗನ್ ಫ್ರೂಟ್ ಕೃಷಿ- ಎಕರೆಗೆ 5 ಲಕ್ಷ ರೂ. ಗಳಿಕೆ: ಸಾಕಷ್ಟು ಕೃಷಿ ಭೂಮಿ ಇದೆ, ಆದರೆ ಹೆಚ್ಚಿಗೆ ನೀರಿಲ್ಲ. ಏನಾದರೊಂದು ಹೊಸ ಬಗೆಯ ವಾಣಿಜ್ಯ ಕೃಷಿ ಮಾಡಬೇಕು ಅಂದ್ರೆ ವಿದೇಶಿ ಬೆಳೆ ಡ್ರ್ಯಾಗನ್ ಫ್ರೂಟ್ ಒಳ್ಳೆಯ ಆಯ್ಕೆ. ಈ ಹಣ್ಣಿನ ಬೆಳೆಯನ್ನು ಯಾವ ರೀತಿಯ ಮಣ್ಣಿನಲ್ಲಾದರೂ ಬೆಳೆಯಬಹುದು. ಜತೆಗೆ ಬೇಸಿಗೆಯಲ್ಲಿ 40 ಡಿಗ್ರಿಯಷ್ಟು ಬಿಸಿಲನ್ನು ಡ್ರ್ಯಾಗನ್ ಫ್ರೂಟ್ ತಡೆದುಕೊಳ್ಳುತ್ತದೆ. ಸಮಶೀತೋಷ್ಣ ವಾತಾವರಣದಲ್ಲೂ ಡ್ರ್ಯಾಗನ್ ಫ್ರೂಟ್ ಅನ್ನು ಚೆನ್ನಾಗಿ ಬೆಳೆಯಬಹುದು. ಇನ್ನು ಇದಕ್ಕೆ ಹೆಚ್ಚು ಆರೈಕೆ ಮಾಡುವ ಅಗತ್ಯವಿಲ್ಲ. ವಾರದಿಂದ 10 ದಿನಕ್ಕೊಮ್ಮೆ ನೀರು ಕೊಟ್ಟರೆ ಸಾಕು. ಮತ್ತೊಂದು ವಿಶೇಷ ಅಂದ್ರೆ ಡ್ರ್ಯಾಗನ್ ಫ್ರೂಟ್ ಕೃಷಿಗೆ ಹಾಕಿದ ಆರಂಭಿಕ ಬಂಡವಾಳವನ್ನು ಎರಡರಿಂದ ಮೂರು ವರ್ಷಗಳಲ್ಲಿ ಹಿಂಪಡೆಯಬಹುದು. ಭಾರತದಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಸೇರಿ ಹಲವು ರಾಜ್ಯಗಳಲ್ಲಿ ಡ್ರ್ಯಾಗನ್ ಫ್ರೂಟ್ ಕೃಷಿ ಮುನ್ನೆಲೆಗೆ ಬರುತ್ತಿದೆ. ಹಾಗಾಗಿ ಸ್ಥಳೀಯ ಮಾರುಟಕ್ಕೆಗೆ ಪೂರೈಕೆ ಮಾಡುವ ಜತೆಗೆ ವಿದೇಶಿ ಮಾರುಕಟ್ಟೆಗೆ ಡ್ರ್ಯಾಗನ್ ಫ್ರೂಟ್ ರಫ್ತು ಮಾಡುವ ಅವಕಾಶವೂ ರೈತರಿಗಿದೆ. ಗಿಡಗಳನ್ನು ನಾಟಿ ಮಾಡಿದ ಮೂರು ವರ್ಷಗಳ ನಂತರ ಪ್ರತಿ ಎಕರೆಗೆ 5 ರಿಂದ 6 ಟನ್ ಇಳುವರಿ ನಿರೀಕ್ಷಿಸಬಹುದಾಗಿದೆ. ಈ ಹಣ್ಣಿಗೆ ಹೆಚ್ಚಿನ ಬೆಳಕು ಅಗತ್ಯವಿರುವುದರಿಂದ ಇದನ್ನು ಏಕ ಬೆಳೆಯಾಗಿ ಬೆಳೆಯಬೇಕು. ಸದ್ಯ ಮಾರುಕಟ್ಟೆಯಲ್ಲಿ ಡ್ರ್ಯಾಗನ್ ಫೂನ್ನ ವೆರೈಟಿ ಮತ್ತು ಗುಣಮಟ್ಟ ಆಧರಿಸಿ ರೈತರಿಗೆ ಕೆ.ಜಿ. ಫ್ರೂಟ್‌ಗೆ 150 ರಿಂದ 200 ರೂ. ವರೆಗೆ ಸಿಗುತ್ತಿದೆ. ರಿಟೇಲ್ ಮಾರುಕಟ್ಟೆಯಲ್ಲಿ ಒಂದು ಕೆ.ಜಿ. ಡ್ರ್ಯಾಗನ್ ಫ್ರೂಟ್ ಬೆಲೆ 250 ರಿಂದ 450 ರೂ. ವರೆಗೆ ಇದೆ. ಋತುಮಾನ ಮತ್ತು ಗುಣಮಟ್ಟದ ಆಧಾರದಲ್ಲಿ ಬೆಲೆಯಲ್ಲಿ ಸ್ವಲ್ಪ ಏರಿಳಿತವಾಗುತ್ತದೆ.

ದಾಳಿಂಬೆ ಕೃಷಿ ಮಾಡಿ ಎಕರೆಗೆ 10 ಲಕ್ಷ ರೂ. ಗಳಿಸಿ: ದಾಳಿಂಬೆ ಉತ್ಪಾದನೆಯಲ್ಲಿ ಭಾರತ ವಿಶ್ವದ ಪ್ರಮುಖ ರಾಷ್ಟ್ರವಾಗಿದೆ. ದೇಶದಲ್ಲಿ ಕಳೆದ ಎರಡು ದಶಕಗಳ ಅವಧಿಯಲ್ಲಿ ದಾಳಿಂಬೆ ವಿಸ್ತೀರ್ಣ, ಉತ್ಪಾದನೆ ಮತ್ತು ರಫ್ತುಗಳಲ್ಲಿ ಸ್ಥಿರವಾಗಿ ಹೆಚ್ಚಳವಾಗುತ್ತಿದೆ. ದಾಳಿಂಬೆ ಬೆಳೆ ವಿಸ್ತೀರ್ಣ ಮತ್ತು ಉತ್ಪಾದನೆಯಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದ್ದು, ನಂತರ ಸ್ಥಾನದಲ್ಲಿ ಕರ್ನಾಟಕ, ಗುಜರಾತ್ ಮತ್ತು ಆಂಧ್ರಪ್ರದೇಶ ರಾಜ್ಯಗಳಿವೆ. ಜಾಗತಿಕ ಮಾರುಕಟ್ಟೆ ವಿಚಾರಕ್ಕೆ ಬರುವುದಾದರೆ 2018 ರ ಅಂಕಿ-ಅಂಶದಂತೆ ದಾಳಿಂಬೆಯ ಮಾರುಕಟ್ಟೆ ಮೌಲ್ಯ 59,860 ಕೋಟಿ ರೂ. ಇದು 2026ರ ವೇಳೆಗೆ 1,68,922 ಕೋಟಿ ರೂ.ಗೆ ಏರಿಕೆಯಾಗುವ ಅಂದಾಜಿದೆ. ಹಾಗಾಗಿ ದಾಳಿಂಬೆ ಬೆಳೆಗೆ ಸ್ಥಳೀಯವಾಗಿ ಮತ್ತು ಜಾಗತಿಕವಾಗಿ ಬೇಡಿಕೆ ಹೆಚ್ಚಳವಾಗೋದು ನಿಶ್ಚಿತ. ದಾಳಿಂಬೆ ಕೃಷಿ ಮಾಡಿ 10 ಲಕ್ಷ, 20 ಲಕ್ಷ, 30 ಲಕ್ಷ, 1 ಕೋಟಿ, 2 ಕೋಟಿ ರೂ. ಸಂಪಾದಿಸಿರುವ ಅನೇಕ ರೈತರು ಕರ್ನಾಟಕದಲ್ಲೇ ಇದ್ದಾರೆ. ಒಂದು ಎಕರೆ ದಾಳಿಂಬೆ ಕೃಷಿ ಮಾಡಲು ಆರಂಭದಲ್ಲಿ ಸಸಿ ವೆಚ್ಚ, ಡ್ರಿಪ್ ಖರ್ಚು, ಗೊಬ್ಬರ, ಕೆಲಸದವರ ಕೂಲಿ ಎಲ್ಲವೂ ಸೇರಿ ಒಂದರಿಂದ ಒಂದೂವರೆ ಲಕ್ಷ ರೂ. ಖರ್ಚು ಬರುತ್ತದೆ. ಎಕರೆಗೆ 300 ದಾಳಿಂಬೆ ಗಿಡಗಳನ್ನು ಬೆಳೆಸಬಹುದು. ಒಳ್ಳೆಯ ಇಳುವರಿ ತೆಗೆದರೆ ಒಂದು ಎಕರೆ ದಾಳಿಂಬೆಯಂದ 10 ರಿಂದ 12 ಲಕ್ಷ ರೂ. ಆದಾಯ ಪಡೆಯಬಹುದು.



ಸಿಇಒ, ಸಂಸ್ಥಾಪಕರು ಇಂಡಿಯನ್‌ಮನಿ.ಕಾಂ
ವೆಬ್‌ಸೈಟ್: www.indianmoney.com



ಫೈನಾನ್ಷಿಯಲ್ ಫ್ರೀಡಂ ಆ್ಯಪ್‌ನಲ್ಲಿ ಹಣ್ಣಿನ ಕೃಷಿ ಕೋರ್ಸ್

ಫೈನಾನ್ಷಿಯಲ್ ಫ್ರೀಡಂ ಆ್ಯಪ್‌ನಲ್ಲಿ ಹಣ್ಣಿನ ಬೆಳೆಗಳ ಕುರಿತಾದ ಹತ್ತಾರು ಕೋರ್ಸ್‌ಗಳಿವೆ, ಡ್ರ್ಯಾಗನ್ ಫ್ರೂಟ್, ತೈವಾನ್ ಸೀಬೆ, ದಾಳಿಂಬೆ, ರಂಬೂಟಾನ್, ನೇರಳೆ, ಬಟರ್ ಫ್ರೂಟ್, ಹಲಸಿನ ಹಣ್ಣು, ಪಪ್ಪಾಯ ಹೀಗೆ ಹತ್ತು ಹಲವು ಹಣ್ಣಿನ ಮಾದರಿಗಳ ಬಗ್ಗೆ ಇಲ್ಲಿ ಪೂರ್ಣ ಮಾಹಿತಿ ಕೋರ್ಸ್‌ಗಳಿವೆ. ನಿರ್ದಿಷ್ಟ ಕ್ಷೇತ್ರದಲ್ಲಿ ಯಶಸ್ಸುಗಳಿಸಿರುವ ಸಾಧಕರೇ ಇಲ್ಲಿ ಮಾರ್ಗದರ್ಶಕರಾಗಿದ್ದಾರೆ. ಇನ್ನೇಕೆ ತಡ ಈಗಲೇ ಫೈನಾನ್ಷಿಯಲ್ ಫ್ರೀಡಂ ಆ್ಯಪ್ ಡೌನ್‌ಲೋಡ್ ಮಾಡಿ, ಹಣ್ಣಿನ ಬೇಸಾಯದ ಬಗ್ಗೆ ಕಲಿತು ಹೆಚ್ಚಿಚ್ಚು ಆದಾಯ ಗಳಿಸಿ.

ಮೇಕಪ್ ಆರ್ಟಿಸ್ಟ್, ಅಣಬೆ ಮತ್ತು ಆಯಿಲ್ ಮಿಲ್ ಬಿಸಿನೆಸ್ ಬಗ್ಗೆ ಕಾರ್ಯಾಗಾರ

ಇಂಡಿಯನ್ ಮನಿ ಡಾಟ್ ಕಾಂನ ಫೈನಾನ್ಷಿಯಲ್ ಫ್ರೀಡಂ ಆ್ಯಪ್‌ವತಿಯಿಂದ ಮೇಕಪ್ ಆರ್ಟಿಸ್ಟ್, ಅಣಬೆ ಮತ್ತು ಗಾಣದ ಎಣ್ಣೆ (ಆಯಿಲ್ ಮಿಲ್) ಬಿಸಿನೆಸ್ ತರಬೇತಿ ಜತೆ ಉದ್ಯಮ ಮಾರ್ಗದರ್ಶನ ಕಾರ್ಯಾಗಾರ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 7975465873ಕ್ಕೆ ಸಂಪರ್ಕಿಸಿ.



ಕಾಲ ಬದಲಾದಂತೆ ಕೃಷಿ ಕ್ಷೇತ್ರವೂ ಅನೇಕ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದೆ. ಕೃಷಿ ಭೂಮಿಯ ಲಭ್ಯತೆ ಕಡಿಮೆಯಾದಂತೆ ಬೆಳೆ ಬೆಳೆಯಲು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲಾಗುತ್ತಿದ್ದು, ಕರಾವಳಿಯ ರೈತರೊಬ್ಬರು ನೀರು, ಕೋಕೋಪಿಟ್ ಬಳಸಿ ಹೂವಿನ ಕೃಷಿ ಮಾಡುತ್ತಿದ್ದರೆ, ಹುಣಸೂರಿನ ನಿವೃತ್ತ ಯೋಧರೊಬ್ಬರು ಕೋಕೋಪಿಟ್ ಉದ್ಯಮದಲ್ಲೇ ಯಶಸ್ಸು ಕಂಡಿದ್ದಾರೆ.



ಜಲಕೃಷಿಯಲ್ಲಿ ಅರಳಿದ ಮಲ್ಲಿಗೆ

ಶ್ರೀರಕ್ಷಾ ಶಂಕರ್
ಎಸ್‌ಡಿಎಂ ಸ್ನಾತಕೋತ್ತರ ಕೇಂದ್ರ, ಉಜಿರೆ

ಭೂಮಿಯನ್ನು ಹದಗಳಿಸಿ, ನಾಟಿಮಾಡಿ, ಕಳೆ ಕಿತ್ತು, ಔಷಧ ಸಿಂಪಡಿಸಿ ಕೊನೆಗೆ ಫಸಲು ಕೊಯ್ದು ಮಾರಾಟ ಮಡುವುದು ನಾವು ನೋಡುವ ಸಾಮಾನ್ಯ ಭೂ ಕೃಷಿ ವಿಧಾನ. ಆದರೆ, ಇತ್ತೀಚೆಗೆ ಕೃಷಿ ಮಾಡಲು ಭೂಮಿಯ ಕೊರತೆ, ಲಭ್ಯ ಭೂಮಿಯಲ್ಲಿ ಫಲವತ್ತತೆ ಹೊಂದಿರದ ಕಾರಣ ಅದೆಷ್ಟೋ ಮಂದಿ ಕೃಷಿಯಿಂದ ದೂರ ಉಳಿದಿದ್ದಾರೆ. ಇದಕ್ಕೆ ಪರ್ಯಾಯವಾಗಿ ಮಣ್ಣಿನ ಸಹಾಯವಿಲ್ಲದೆ ಕೃಷಿ ಮಾಡಲು ಸಾಧ್ಯ ಎಂದು ತೋರಿಸಿದ್ದಾರೆ ಕರಾವಳಿಯ ಶಂಕರಪುರದ ಜೋಸೆಫ್ ಲೋಬೋ. ಹೈಡ್ರೋಪೋನಿಕ್ಸ್ ಅಂದರೆ 'ಜಲಕೃಷಿ' ಮೂಲಕ ಹೂ-ಹಣ್ಣು ಮತ್ತು ತರಕಾರಿ ಬೆಳೆದು, ಜಲಕೃಷಿಯಲ್ಲಿ ಮಲ್ಲಿಗೆ ಬೆಳೆದ ಮೊದಲ ಕರಾವಳಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಏನಿದು ಜಲಕೃಷಿ?: ಜಲಕೃಷಿ ಎಂದರೆ ಮಣ್ಣನ್ನು ಬಳಸದೇ ನೀರು ಅಥವಾ ಪೋಷಕಾಂಶಯುಕ್ತ ವಸ್ತುಗಳನ್ನು ಬಳಸಿ ಮಾಡುವ ಕೃಷಿ. ಇದು ಜಪಾನ್ ಹಾಗೂ ಇಸ್ರೇಲ್ ದೇಶಗಳಲ್ಲಿ ಅತಿ ಹೆಚ್ಚಾಗಿ ಕಂಡುಬರುವ ಕೃಷಿ ವಿಧಾನ. ಭಾರತದಲ್ಲಿ ಈ ವಿಧಾನವು ಕಡಿಮೆ ಪ್ರಮಾಣದಲ್ಲಿ ಚಾಲ್ತಿಯಲ್ಲಿದೆ. ಉಡುಪಿಯ ಶಂಕಾರಪುರ ಕರಾವಳಿಯ ಮಲ್ಲಿಗೆ ರಾಜಧಾನಿ ಎಂದೇ ಪ್ರಖ್ಯಾತ. ಇಲ್ಲಿನ ರೈತರ ಮೂಲ ಬೆಳೆಯೇ ಮಲ್ಲಿಗೆ. ಆದರೆ, ಜೋಸೆಫ್ ಲೋಬೋ ಎಲ್ಲ ರೈತರಿಗಿಂತ ಭಿನ್ನವಾಗಿ ಲ್ಲುವುದು ಜಲಕೃಷಿ ವಿಧಾನದಿಂದ. ಕರೊನಾ ಸಮಯದಲ್ಲಿ ಪ್ರಾಯೋಗಿಕವಾಗಿ ಆರಂಭಿಸಿದ 'ಜಲಕೃಷಿ' ಹಿಂದಿನ ವರ್ಷಗಳಿಗಿಂತ ಹೆಚ್ಚು ಇಳುವರಿ ನೀಡುವ ಮೂಲಕ ಜೋಸೆಫ್ ಅವರನ್ನು ಈ ಪ್ರಯೋಗದಲ್ಲಿ ಯಶಸ್ವಿಯಾಗಿಸಿದೆ. ಮಣ್ಣನ್ನು ಬಳಸದೇ ತೆಂಗಿನ ನಾರಿನಿಂದ ತಯಾರಾಗುವ ಕೋಕೋಪಿಟ್ ಹಾಗೂ ಕೋಕೋ ಮ್ಯಾನ್ಯೂರ್ ಬಳಸಿ ಮಲ್ಲಿಗೆ ಸೇರಿ ಮೂವತ್ತಕ್ಕೂ ಹೆಚ್ಚು ತಳಿಯ ವಿವಿಧ ಹೂ ಮತ್ತು ಹಣ್ಣುಗಳನ್ನು ಜೋಸೆಫ್ ಬೆಳೆದಿದ್ದಾರೆ. ಮಣ್ಣಿಗಿಂತ ಹೆಚ್ಚು ಕಾಲ ನೀರನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿರುವ ತೆಂಗಿನ ನಾರಿನ ಪದಾರ್ಥಗಳಲ್ಲಿ ಗಿಡಗಳ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳನ್ನು ಸೇರಿಸಲಾಗಿರುತ್ತದೆ. ಇದರಿಂದ ಹೆಚ್ಚು ಇಳುವರಿ ನೀಡಲು ಸಾಧ್ಯವಾಗುತ್ತದೆ.

ಮಾಡುವುದು ಹೇಗೆ?

ರಂಧ್ರಗಳಿರುವ ಬುಟ್ಟಿಯಲ್ಲಿ ಮೊಳಕೆಯೊಡೆದು ಬೇರು ಬಂದಿರುವ ಗಿಡವನ್ನು ಕೋಕೋಪಿಟ್, ಕೋಕೋ ಮ್ಯಾನ್ಯೂರ್‌ನಲ್ಲಿ ನೆಡಬೇಕು. ಒಂದು ಬಕೆಟ್‌ನಲ್ಲಿ ನೀರು ಅಥವಾ ಜೀವಾಮೃತ ಎಂದರೆ ಗೋವಿನ ತ್ಯಾಜದಲ್ಲಿ ಗಿಡವನ್ನು ನೆಟ್ಟ ಬುಟ್ಟಿಯನ್ನು ಇರಿಸಿ ಸೂರ್ಯನ ಬೆಳಕು ಕೊಂಚಮಟ್ಟಿಗೆ ಬೀಳುವಂತೆ ನೋಡಿಕೊಳ್ಳಬೇಕು. ಹೀಗೆ ಮಾಡುವುದರಿಂದ ಗಿಡಗಳು ಅತೀ ಶೀಘ್ರವಾಗಿ ಫಸಲು ನೀಡುತ್ತವೆ. ಅಲ್ಲದೆ ಈ ರೀತಿ ಬೆಳೆದ ಸಸ್ಯಗಳಲ್ಲಿ ರೋಗಗಳು ಕಡಿಮೆ. ಕುರಚಲು, ಪೋದೆ ಜಾತಿ ಅಲ್ಲದೆ, ಕಡಿಮೆ ಎತ್ತರ ಬೆಳೆಯುವ ಸಸ್ಯಗಳು ಜಲಕೃಷಿಗೆ ಸೂಕ್ತ ಎನ್ನುತ್ತಾರೆ ಜೋಸೆಫ್.

07-02-2022 Vv Pg 11

07-02-2022 Uv Pg 07

ಬೆಂಬಲ ಬೆಲೆಯಲ್ಲಿ ಕಡಲೆ ಖರೀದಿಸದ ರಾಜ್ಯ ಸರಕಾರ

• ಹಣಮಂತರಾವ ಭೈರಾಮಡಗಿ

ಕಲಬುರಗಿ: ಉತ್ತರ ಕರ್ನಾಟಕವಲ್ಲ, ಬಹುತೇಕ ಕರ್ನಾಟಕ ದಾದ್ಯಂತ ಹಿಂಗಾರಿನ ಪ್ರಮುಖ ವಾಣಿಜ್ಯ ಬೆಳೆ ಕಡಲೆಯು ಬೆಂಬಲ ಬೆಲೆ(ಎಂಎಸ್‌ಪಿ)ಗಿಂತ ಕಡಿಮೆ ದರಕ್ಕೆ ಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿದೆ. ಆದರೂ ಸರ್ಕಾರ ಬೆಂಬಲ ಬೆಲೆಯಲ್ಲಿ ಖರೀದಿಗೆ ಮುಂದಾಗುತ್ತಿಲ್ಲ.



ಕೃಷಿ ಉತ್ಪನ್ನಗಳು ಮಾರುಕಟ್ಟೆಗೆ ಬಂದ ಸಂದರ್ಭ ಬೆಂಬಲ ಬೆಲೆಗಿಂತ ಕನಿಷ್ಠ ದರ ಕುಸಿತವಾದರೆ ಖರೀದಿ ಕೇಂದ್ರಗಳನ್ನು ತೆರೆದು ಬೆಂಬಲ ಬೆಲೆಯಲ್ಲಿ ಖರೀದಿಸಬೇಕು. ಆದರೆ ಕಡಲೆಯಲ್ಲಿ ಇದಾಗುತ್ತಿಲ್ಲ ಎಂಬುದು ರೈತರ ಕೊರಗು. ಕಡಲೆ ಬೆಂಬಲ ಬೆಲೆ ಕ್ವಿಂಟಲ್‌ಗೆ 5230 ರೂ. ಇದೆ. ಆದರೆ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ 4400 ರೂ.ದಿಂದ 4500ರೂ.ಗೆ ಮಾರಾಟವಾಗುತ್ತಿದೆ. ಕ್ವಿಂಟಲ್‌ದಿಂದ ರೈತರಿಗೆ 700 ರೂ.ದಿಂದ 800 ನಷ್ಟವಾಗುತ್ತಿದೆ. ಅತಿವೃಷ್ಟಿ- ಅನಾವೃಷ್ಟಿಯಿಂದ ಮುಂಗಾರಿನ ಬೆಳೆಗಳು ನಷ್ಟವಾಗಿ ಕಡಲೆ ಮಾತ್ರ ಸಮೃದ್ಧವಾಗಿ ಬಂದಿದೆ. ಆದರೆ ಇದಕ್ಕೆ ಬೆಲೆ ಕುಸಿತ ಮತ್ತೊಂದು ಪೆಟ್ಟು ನೀಡಿರುವುದು ರೈತ ಮತ್ತೆ ಕಣ್ಣೀರು ಹಾಕುವಂತಾಗಿದೆ.

ಅತಿವೃಷ್ಟಿ-ಅನಾವೃಷ್ಟಿಯಿಂದ ಮುಂಗಾರು ಹಂಗಾಮಿನ ತೊಗರಿ ಸೇರಿ ಇತರ ಬೆಳೆಗಳು ಸಂಪೂರ್ಣ ಹಾಳಾಗಿದ್ದರಿಂದ ಆ ಜಾಗದಲ್ಲಿ ಹಾಗೂ ಜೋಳದ ಬೆಲೆ ಸಹ ಕಡಿಮೆ ಇರುವ ಹಿನ್ನೆಲೆ ಯಲ್ಲಿ ರೈತರು ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಕಡಲೆ ಬೆಳೆದಿದ್ದಾರೆ. ಈ ಹಿಂದಿಗಿಂತಲೂ ಉತ್ತಮವಾಗಿ ಇಳುವರಿ ಬರುತ್ತಿದೆ.

2018 ಹಾಗೂ 2019ರಲ್ಲಿ ಮಾರುಕಟ್ಟೆಯಲ್ಲಿ ಕಡಲೆ ಬೆಲೆ ಕುಸಿತವಾಗಿತ್ತು. ಬೆಂಬಲ ಬೆಲೆಗಿಂತ ಕುಸಿತವಾಗಿದ್ದರಿಂದ ಸರ್ಕಾರ, ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಮೂಲಕ ಖರೀದಿ ಕೇಂದ್ರಗಳನ್ನು ತೆರೆದು ಕೇಂದ್ರದ ಬೆಂಬಲ ಬೆಲೆ ಕ್ವಿಂಟಲ್‌ಗೆ ಆಗಿನ ಬೆಂಬಲ ಬೆಲೆ 4400 ರೂ. ದರದಲ್ಲಿ ಕಡಲೆ ಖರೀದಿಸಲಾಗಿತ್ತು. ಈಗ 5230 ರೂ. ಬೆಂಬಲ ಬೆಲೆಯಿದೆ. ಉತ್ತರ ಕರ್ನಾಟಕ ದಾದ್ಯಂತ ಪ್ರತಿವರ್ಷ 12 ರಿಂದ 14.50 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಡಲೆ ಬಿತ್ತನೆಯಾಗುತ್ತಿತ್ತು. ಆದರೆ ಪ್ರಸಕ್ತ ವರ್ಷ 19ರಿಂದ 20 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಕಡಲೆ ಬಿತ್ತನೆಯಾಗಿದೆ. ಕಲಬುರಗಿ ಜಿಲ್ಲೆಯೊಂದರಲ್ಲೇ ಒಂದು ಲಕ್ಷ ಎಕರೆ ಭೂಮಿಯಲ್ಲಿ ಕಡಲೆ ಬೆಳೆಯಲಾಗಿದೆ.

ಬೆಲೆ ಕುಸಿತ ಆರಂಭ: ಕಳೆದ 2 ವಾರದಿಂದ ಕಡಲೆ ರಾಶಿಯಾಗಿ ಮಾರುಕಟ್ಟೆಗೆ ಪ್ರವೇಶವಾಗುತ್ತಿದೆ. ಆದರೆ ಕಡಲೆ ಮಾರುಕಟ್ಟೆಗೆ ಬರುವ ಮುಂಚೆ 5300 ರೂ.ದಿಂದ 5600 ರೂ. ಬೆಲೆ ಇತ್ತು. ಆದರೆ ಮಾರುಕಟ್ಟೆಗೆ ಕಡಲೆ ಬರುತ್ತಿದ್ದಂತೆ ದಿನೇದಿನೆ ಬೆಲೆ ಕುಸಿತವಾಗುತ್ತಿದೆ. ಫೆ.4ರ ಶುಕ್ರವಾರ ಮಾರುಕಟ್ಟೆಯಲ್ಲಿ 4300 ರೂ.ದಿಂದ 4400 ರೂ. ಮಾತ್ರ ದರವಿತ್ತು. ಎರಡು ವಾರಗಳಲ್ಲೇ ಕ್ವಿಂಟಲ್‌ಗೆ ಒಂದು ಸಾವಿರ ರೂ. ಸಮೀಪ ಬೆಲೆ ಕುಸಿತವಾಗಿದೆ. ಕಡಲೆ ತೊಗರಿ ಹಾಗೆ ಬಹಳ ದಿನ ದಾಸ್ತಾನು ಇಡಲಿಕ್ಕಾಗಲ್ಲ. ಹೀಗಾಗಿ ರಾಶಿಯಾದ ನಂತರ ನೇರವಾಗಿ ಕಡಲೆ ಮಾರುಕಟ್ಟೆಗೆ ತರಲಾಗುತ್ತದೆ. ಇದನ್ನೇ ಬಂಡವಾಳ ಮಾಡಿಕೊಂಡು ಬೆಲೆ ಕುಸಿತದ ಬರೆ ಎಳೆಯಲಾಗುತ್ತಿದೆ. ತಕ್ಷಣವೇ ಖರೀದಿ ಕೇಂದ್ರ ಶುರು ಮಾಡಿದ್ದಲ್ಲಿ ರೈತರಿಗೆ ಅನುಕೂಲವಾಗಲು ಸಾಧ್ಯವಾಗುತ್ತದೆ. ತಡವಾಗಿ ಶುರು ಮಾಡಿದರೆ ವ್ಯಾಪಾರಿಗಳಿಗೆ ಲಾಭ ಮಾಡಿಕೊಟ್ಟಂತಾಗುತ್ತದೆ.

ತೊಗರಿ ಖರೀದಿಗೆ ಮತ್ತಷ್ಟು ಅವಧಿ: ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿಗೆಂದು ಕಲ್ಯಾಣ ಕರ್ನಾಟಕ-ಕಿತ್ತೂರು ಕರ್ನಾಟಕದಲ್ಲಿ ತೊಗರಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ಬೆಂಬಲ ಬೆಲೆ ಕ್ವಿಂಟಲ್‌ಗೆ 6300 ರೂ. ಇದೆ. ಆದರೆ ಮಾರುಕಟ್ಟೆಯಲ್ಲಿ 6,400 ರೂ.ದಿಂದ 6,500ರೂ.ಗೆ ತೊಗರಿ ಮಾರಾಟವಾಗುತ್ತಿದೆ. ಖರೀದಿ ಕೇಂದ್ರಗಳನ್ನು ಸ್ಥಾಪಿಸಿದ್ದರಿಂದ ಮಾರುಕಟ್ಟೆಯಲ್ಲಿ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ಮಾರಾಟವಾಗುತ್ತಿಲ್ಲ.

ಇನ್ನು ಹಿಂದಿನ ಸರ್ಕಾರ ಕೇಂದ್ರದ ಬೆಂಬಲ ಬೆಲೆ ಜತೆಗೆ ರಾಜ್ಯ ಸರ್ಕಾರ ಕ್ವಿಂಟಲ್‌ಗೆ 300 ರೂ.ದಿಂದ 450 ರೂ. ಪ್ರೋತ್ಸಾಹಧನ ನೀಡುತ್ತ ಬಂದಿತ್ತು. ಆದರೆ ಕಳೆದೆರಡು ವರ್ಷದಿಂದ ರಾಜ್ಯ ಸರ್ಕಾರ ನಯಾಪೈಸೆ ಪ್ರೋತ್ಸಾಹಧನ ನೀಡುತ್ತಿಲ್ಲ. ಒಂದು ವೇಳೆ ಸರ್ಕಾರ ಪ್ರೋತ್ಸಾಹಧನ ನೀಡಿದ್ದೇಯಾದಲ್ಲಿ ಮಾರುಕಟ್ಟೆಯಲ್ಲೀಗ ತೊಗರಿ ದರ ಕ್ವಿಂಟಲ್ 7000 ರೂ. ಇರುತ್ತಿತ್ತು. ಬೆಂಬಲ ಬೆಲೆಯಷ್ಟೇ ಮಾರುಕಟ್ಟೆಯಲ್ಲಿ ದರ ಇರುವುದರಿಂದ ಹಾಗೂ ರಾಜ್ಯ ಸರ್ಕಾರ ಪ್ರೋತ್ಸಾಹಧನ ನೀಡದೇ ಇರುವುದರಿಂದ ರೈತರು ತೊಗರಿ ಖರೀದಿ ಕೇಂದ್ರಗಳತ್ತ ಮುಖ ಮಾಡುತ್ತಿಲ್ಲ. ಹೀಗಾಗಿ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಪ್ರತಿ ರೈತನಿಂದ ಗರಿಷ್ಠ 15 ಕ್ವಿಂಟಲ್ ಮಾತ್ರ ಖರೀದಿ ಎಂಬ ನಿಯಮ ತೆಗೆದು ಹಾಕಿ ಜತೆಗೆ ಖರೀದಿ ಹಾಗೂ ರೈತರ ನೋಂದಣಿ ದಿನಾಂಕವನ್ನು ಮಾಸಾಂತ್ಯದವರೆಗೂ ವಿಸ್ತರಿಸಿ ಆದೇಶ ಹೊರಡಿಸಿದೆ. ಸರ್ಕಾರ ತಕ್ಷಣ ಎಚ್ಚೆತ್ತು ಬೆಂಬಲ ಬೆಲೆಯಲ್ಲಿ ಕಡಲೆ ಖರೀದಿ ಕೇಂದ್ರಗಳನ್ನು ತೆರೆಯಬೇಕು ಎಂಬುದು ರೈತರ ಆಗ್ರಹವಾಗಿದೆ.

> ಮಾಹಿತಿ ಪಡೆದು ಬೆಂಬಲ ಬೆಲೆಯಲ್ಲಿ ಕಡಲೆ ಖರೀದಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ಅನುಮತಿ ನೀಡಿದ ತಕ್ಷಣ ಖರೀದಿ ಕೇಂದ್ರ ಸ್ಥಾಪಿಸಲಾಗುವುದು.
>
> • ಯಶವಂತ ವಿ. ಗುರುಕರ್, ಜಿಲ್ಲಾಧಿಕಾರಿ ಕಲಬುರಗಿ

> ಕಲಬುರಗಿ ಜಿಲ್ಲೆಯಲ್ಲಿ ಕಡಲೆ ಬಿತ್ತನೆ ಪ್ರದೇಶವೂ ಹೆಚ್ಚಾಗಿದೆ. ಬೆಳೆಯೂ ಸಮೃದ್ಧವಾಗಿ ಬಂದಿದೆ. ಆದರೆ ಮಾರುಕಟ್ಟೆಯಲ್ಲಿ ಬೆಲೆ ಕುಸಿದಿದೆ. ಹೀಗಾಗಿ ಬೆಂಬಲ ಬೆಲೆಗೆ ಖರೀದಿ ಮಾಡುವ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗುವುದು.
>
> • ಡಾ|ರತೇಂದ್ರನಾಥ ಸುಗೂರ, ಜಂಟಿ ಕೃಷಿ ನಿರ್ದೇಶಕ, ಕಲಬುರಗಿ

ಬಿದಿರು... ನೀನಾರಿಗಲ್ಲವಾದೆ?

ಇದು, ಆರ್ಥಿಕ ಅಭಿವೃದ್ಧಿಯ ಹೆಬ್ಬಾಗಿಲನ್ನೂ ತೆರೆಯಬಲ್ಲದು

• ಪ.ರಾಮಕೃಷ್ಣ ಶಾಸ್ತ್ರಿ

ಕಳೆದ ವರ್ಷ ಮಲೆನಾಡಿನ ಕೆಲವು ಊರುಗಳಿಗೆ ತೆರಳಿದ್ದಾಗ, ದಾರಿಯುದ್ದಕ್ಕೂ ಉರುಳಿಬಿದ್ದಿದ್ದ ಒಣ ಬಿದಿರಿನ ಹಿಂಡಲುಗಳು ಕಂಡವು. ಕಾಡ್ಗಿಚ್ಚಿಗೂ ಕಾರಣವಾಗಬಲ್ಲ ಈ ನೈಸರ್ಗಿಕ ವನ್ಯಸಂಪತ್ತು ಅರಣ್ಯಾಧಿಕಾರಿಗಳ ನಿರ್ಲಕ್ಷ್ಯದ ಫಲವಾಗಿ ಬಳಕೆಯಾಗದೆ ಮಣ್ಣು ಸೇರುತ್ತಿದೆ ಅನಿಸಿತು.

ನಿಜ, ಭಾರತವು ಬಿದಿರು ಎಂಬ ಬಂಗಾರ ಬೆಳೆಯುವ ರಾಷ್ಟ್ರಗಳಲ್ಲಿ ಎರಡನೆಯ ಸ್ಥಾನದಲ್ಲಿದೆ. ಇಲ್ಲಿ ಅದರ ಬಳಕೆಯಾಗುತ್ತಿರುವುದು ಪ್ರತಿಶತ ನಾಲ್ಕು ಮಾತ್ರ. ಅರಣ್ಯದೊಳಕ್ಕೆ ಹೋಗಿ ಬಿದಿರನ್ನು ತಂದು ತಟ್ಟಿ, ಬುಟ್ಟಿ ಮಾಡುತ್ತಿದ್ದ ಬುಡಕಟ್ಟು ಜನಾಂಗಗಳಿಗೆ ಪ್ರವೇಶ ನಿರಾಕರಿಸಿದ್ದರ ಫಲವಾಗಿ ಅಂತಹ ಕಸುಬುಗಳು ದೂರ ಸರಿಯುತ್ತಿರುವುದು ಒಂದೆಡೆಯಾದರೆ, ಪ್ಲಾಸ್ಟಿಕ್ ಪರಿಕರಗಳು ಇದಕ್ಕಿಂತ ಅಗ್ಗ ಎಂಬ ಕಾರಣಕ್ಕೆ ಬಿದಿರಿನ ವಸ್ತುಗಳು ಬೇಡಿಕೆಯನ್ನೂ ಕಳೆದುಕೊಂಡಿವೆ.

ಭಾರತದ ಕರಾವಳಿಯಿಂದ ಹಿಮಾಚಲದ ತನಕ 125 ಜಾತಿಯ ಬಿದಿರುಗಳು ಬೆಳೆಯುತ್ತಿವೆ. ರಾಸಾಯನಿಕ, ಕೀಟನಾಶಕ ಬಳಸದೆ ನಿಸರ್ಗಕ್ಕೆ ಹಸಿರು ಹೊದೆಸುವ ಸಂಪನ್ಮೂಲವೂ ಹೌದು. ಮರಗಳಿಗಿಂತ ಪ್ರತಿಶತ 35ರಷ್ಟು ಅಧಿಕ ಆಮ್ಲಜನಕವನ್ನು ವಾತಾವರಣಕ್ಕೆ ಅದು ಕೊಡುತ್ತದೆ. ಒಂದೇ ವರ್ಷದಲ್ಲಿ ಗರಿಷ್ಠ ಎತ್ತರ ಬೆಳೆದು ಉಪಯೋಗಕ್ಕೆ ಸಿದ್ಧವಾಗುವ ಜಾತಿಗಳೂ ನಮ್ಮಲ್ಲಿವೆ. ಆದರೂ ಬಿದಿರಿನ ಮಹತ್ವಪೂರ್ಣ ಬಳಕೆಯ ಬಗೆಗೆ ಇನ್ನೂ ಹೆಚ್ಚಿನ ಪ್ರಯತ್ನಗಳು ನಡೆದಿಲ್ಲ.

ಪುಣೆಯ ಯೋಗೀಶ್ ಶಿಂಧೆ ತಮ್ಮ ಪತ್ನಿ ಅಶ್ವಿನಿ ಜತೆಗೂಡಿ ಆರು ವರ್ಷಗಳಿಂದ ಬಿದಿರಿನ ಸದ್ಬಳಕೆಯ ಉದ್ಯಮವನ್ನು ಆರಂಭಿಸಿದ್ದಾರೆ. ಭಾರತದಲ್ಲಿ ತಿಂಗಳಿಗೆ 3.5 ಕೋಟಿ ಹಲ್ಲುಜ್ಜುವ ಬ್ರಷ್‌ಗಳು ಬೀದಿ ಸೇರುತ್ತವೆ ಎಂಬ ಲೆಕ್ಕಾಚಾರ ಸಿಕ್ಕಿದ ಮೇಲೆ ಅವರು ಮೊದಲು ತಯಾರಿಸಿದ್ದು ಬಿದಿರಿನಿಂದ ಟೂತ್‌ಬ್ರಷ್ ಸರಣಿ. ಮಕ್ಕಳಿಗೆ, ವಯಸ್ಕರಿಗೆ ಬೇಕಾದ ಹದಿಮೂರು ಮಾದರಿಯ ಬ್ರಷ್‌ಗಳನ್ನು ಮಾರುಕಟ್ಟೆಗಿಳಿಸಿಗೆದ್ದಿದ್ದಾರೆ. ಇದರಿಂದಾಗಿ 17 ಲಕ್ಷ ಕಿಲೊ ಪ್ರಮಾಣದ ಪ್ಲಾಸ್ಟಿಕ್ ತ್ಯಾಜ್ಯ ಬೀದಿ ಸೇರುವುದನ್ನು ತಡೆಯಲು ಸಾಧ್ಯವಾಗಿದೆ ಎನ್ನುತ್ತಾರೆ ಅವರು.

ಶಿಂಧೆ ದಂಪತಿ ಬಿದಿರಿನಿಂದ ತಯಾರಿಸುವ ಬಹು ವಸ್ತುಗಳ ಬ್ಯಾಂಬೂ ಇಂಡಿಯಾ ಕಾರ್ಖಾನೆ ನೂರಾರು ಮಂದಿಗೆ ಉದ್ಯೋಗ ನೀಡಿದೆ. ತಟ್ಟೆ, ಬುಟ್ಟಿ, ಆಕಾಶದೀಪ, ಬಾಚಣಿಗೆ, ನಾಲಿಗೆ ಕ್ಲೀನರ್, ಕೀಚೈನ್, ಇಯರ್‌ಬಡ್, ಡೆಸ್ಕ್‌ಟಾಪ್ ಪರಿಕರಗಳು, ಲೇಖನಿಗಳು, ಟ್ರಾವೆಲ್ ಕಿಟ್, ರಟ್ಟು ಸೇರಿದಂತೆ ಹಲವಾರು ವಸ್ತುಗಳನ್ನು ಬಿದಿರಿನಿಂದ ತಯಾರಿಸುತ್ತಿದೆ. ಮುಂದಿನ ದಿನಗಳಲ್ಲಿ ಆಭರಣ ಮತ್ತು ಬಟ್ಟೆಗಳನ್ನೂ ಅದು ಬಿದಿರಿನಿಂದ ತಯಾರಿಸಲಿದೆ. ಎಲ್ಲವೂ ಪ್ಲಾಸ್ಟಿಕ್ ವಸ್ತುಗಳಿಗಿಂತ ಅಧಿಕ ದೃಢತೆ ಮತ್ತು ಗುಣಮಟ್ಟ ಹೊಂದಿವೆ. ಇವನ್ನೆಲ್ಲ ತಯಾರಿಸುವ ಯಂತ್ರಗಳು ಚೀನಾ, ತೈವಾನ್, ವಿಯೆಟ್ನಾಂ ಮುಂತಾದ ದೇಶಗಳಿಂದ ಬರಬೇಕಾಗಿತ್ತು. ಶಿಂಧೆ ಈಗ ಇಲ್ಲಿಯೇ ಅಂತಹ ಯಂತ್ರಗಳನ್ನು ತಯಾರಿಸುತ್ತಿದ್ದಾರೆ.

ಹಿರೋಷಿಮಾದಲ್ಲಿ ಪರಮಾಣು ದಾಳಿ ನಡೆದ ಸಂದರ್ಭದಲ್ಲಿ ಬದುಕುಳಿದ ಏಕೈಕ ಸಸ್ಯ ತಾನೆಂಬ ಹೆಮ್ಮೆಗೆ ಬಿದಿರು ಪಾತ್ರವಾಗಿದೆ. ಸಾಮಾಜಿಕ ಉದ್ಯಮಶೀಲತೆಗೆ ಮಹತ್ವದ ಕೊಡುಗೆಯಾಗಿರುವ ಅದು ಉಕ್ಕಿಗಿಂತಲೂ ದೃಢವಾದುದು ಎಂಬುದನ್ನು ಗುರುತಿಸಿದವರು ಜಪಾನ್ ತಂತ್ರಜ್ಞರು. ವಿಶ್ವಯುದ್ಧದ ಸಮಯದಲ್ಲಿ ಅಲ್ಲಿ ಬಿದಿರಿನಿಂದ ತಾತ್ಕಾಲಿಕ ರೈಲು ಸೇತುವೆ ನಿರ್ಮಿಸಿದ್ದರು.



ನಮ್ಮಲ್ಲಿ ಖಾಲಿ ಪ್ರದೇಶಗಳಲ್ಲಿ ಅರಣ್ಯ ಇಲಾಖೆಯವರು ಸಿಲ್ವರ್, ಅಕೇಶಿಯಾದಂತಹ ಮರಗಳನ್ನು ಬೆಳೆದು ಅದರ ಆರೈಕೆಗಾಗಿ ಬಹಳಷ್ಟು ಹಣ ಖರ್ಚು ಮಾಡುತ್ತಾರೆ. ಇದರಿಂದ ಲಾಭ ಸಿಗಲು ದಶಕಗಳ ತನಕ ಕಾದರೂ ಅದು ಸರ್ಕಾರೀಕರಣದ ಯೋಜನೆಯಾದ ಕಾರಣ ಸಾಧಕ, ಬಾಧಕಗಳ ಗಣನೆ ಮಾಡುವುದಿಲ್ಲ. ಆದರೆ ವೆಚ್ಚವಿಲ್ಲದೆ ಶೀಘ್ರವಾಗಿ ಬೆಳೆಯಬಲ್ಲ ಬಿದಿರಿನ ಸಂವರ್ಧನೆಗೆ ಅರಣ್ಯ ಇಲಾಖೆ ನೀಡುತ್ತಿರುವ ಮಹತ್ವ ಅತ್ಯಲ್ಪವಾಗಿದೆ. ಕೇವಲ ಬೆಳೆದರೆ ಸಾಲದು, ಬಿದಿರು ಆಧಾರಿತ ಉತ್ಪನ್ನಗಳ ತಯಾರಿಕೆಗೆ ಗ್ರಾಮೀಣ ಭಾಗದ ಜನರಲ್ಲೂ ಜಾಗೃತಿ ಮೂಡಿಸಬೇಕು. ಯಾಂತ್ರಿಕವಾಗಿ ಸಲಕರಣೆಗಳು ತಯಾರಾಗುವ ಕಾರಣ ಪ್ಲಾಸ್ಟಿಕ್ ಪರಿಕರಗಳಿಗಿಂತ ಅಗ್ಗವಾಗಿ ಕೊಡುವ ಪ್ರಯತ್ನವೂ ನಡೆಯಬೇಕು. ಇದು ದೇಶದ ಆರ್ಥಿಕ ಅಭಿವೃದ್ಧಿಯ ಹೆಬ್ಬಾಗಿಲು ತೆರೆಯಬಹುದು ಎಂಬುದನ್ನು ಮೊದಲು ಅರಣ್ಯ ಇಲಾಖೆಯ ವರಿಷ್ಠರು ಮನಗಾಣಬೇಕು.

ಮೂಡುಬಿದಿರೆಯ ಸೋನ್ಸ್ ಸೇರಿದಂತೆ ನಾನಾ ಜಾತಿಯ ಬಿದಿರಿನ ಪ್ರಾಯೋಗಿಕ ಕೃಷಿ ಮಾಡಿದ ಹಲವರು ನಮ್ಮಲ್ಲಿದ್ದಾರೆ. ಬಿದಿರು ಕೂಡ ಹಣದ ಬೆಳೆಯಾಗುತ್ತದೆಂಬ ಕಲ್ಪನೆ ಜನರಿಗೆ ಮೂಡಬೇಕಿದ್ದರೆ ಪ್ರತೀ ಜಿಲ್ಲೆಯಲ್ಲೂ ಬಿದಿರು ಆಧಾರಿತ ಕೈಗಾರಿಕೆಗಳ ಸ್ಥಾಪನೆಯಾಗಬೇಕು. ಮಲೆನಾಡಿನ ಕಾಡುಗಳಲ್ಲಿ ಹೂ ಬಿಟ್ಟು ಬಿದಿರಕ್ಕಿ ಉದುರಿಸಿ ಬುಡದಿಂದಲೇ ಕಳಚಿ, ಹಲವು ವರ್ಷಗಳ ಕಾಲ ಉಳಿದು ನಾಶವಾಗುವ ಬಿದಿರಿನ ಅವಗಣನೆ ನಿಲ್ಲಬೇಕು.

ಕರ್ನಾಟಕ ಸೇರಿದಂತೆ ಬಿದಿರು ಬೆಳೆಯುವ ರಾಜ್ಯಗಳ ಕುತೂಹಲದ ದೃಷ್ಟಿ ಅದರೆಡೆಗೆ ಹರಿದಿಲ್ಲ. ಅರಣ್ಯ ಇಲಾಖೆಯ ನಿರ್ಬಂಧಗಳ ಪರಿಣಾಮ ಗುಡಿ ಕೈಗಾರಿಕೆಗಳ ಪರಂಪರೆಯೇ ಅಗೋಚರವಾಗುತ್ತಿರುವ ಈ ದಿನಗಳಲ್ಲಿ, ಬಿದಿರಿಗೆ ನೀಡುವ ಅವಕಾಶ ಹೊಸದೊಂದು ಕೈಗಾರಿಕೆ ಕ್ರಾಂತಿಯ ಸೃಷ್ಟಿಗೆ ಕಾರಣವಾಗಬಹುದು.

07-02-2022
Pv Pg 08